International Journal of Kannada Research 2015; 1(1): 29-30

International Journal of Kannada Research
www.kannadajournal.com

**ISSN: 2454–5813**
IJSR 2015; 1(1): 29-30
© 2015 IJKS
www.kannadajournal.com
Received: 14-06-2015
Accepted: 20-07-2015

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ: ಬಿಜಾಪುರ, ಕರ್ನಾಟಕ, ಭಾರತ

**Correspondence**
**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ: ಬಿಜಾಪುರ, ಕರ್ನಾಟಕ, ಭಾರತ

# ಡೊಳ್ಳಿನ ಹಾಡುಗಾರ ಶ್ರೀ.ಸುರೇಶ. ಜೋಶಿ

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**

ಶ್ರೀಯುತ ಸುರೇಶ. ಜೋಶಿಯವರು ವಿಜಾಪೂರ ಜಿಲ್ಲೆಯ ವಿಜಾಪುರ ತಾಲೂಕಿನ ನಿಡೋಣಿ ಗ್ರಾಮದ ಶ್ರೀ:ರಾಮಚಂದ್ರ ಹಾಗೂ ಶ್ರೀಮತಿ:ಜಾನಕಿಬಾಯಿ ದಂಪತಿಗಳ ಉದರದಲ್ಲಿ ಮುದ್ದಿನ ಮಗನಾಗಿ ದಿನಾಂಕ: 22–07–1946 ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸರಕಾರಿ ಕನ್ನಡ ಗಂಡುಮಕ್ಕಳ ಶಾಲೆ ನಿಡೋಣಿಯಲ್ಲಿ ಕಲಿತು. ಪೌಢ ಶಿಕ್ಷಣವನ್ನು ಬಬಲೇಶ್ವರ ಶ್ರೀ ಶಾಂತವೀರ ಪ್ರೌಢ ಶಾಲೆಯಲ್ಲಿ ಮುಗಿಸಿದರು. ದಿನನಿತ್ಯ ತಮ್ಮ ತೋಟಕ್ಕೆ ಹೊಗುವಾಗ ಕುರುಬರ ಓಣಿಯ ಬೀರೇಶ್ವರ ದೇವಾಲಯದ ಮುಂದೆ ಹಾಯ್ದು ಹೊಗುತ್ತಿದ್ದರು. ಅಲ್ಲಿನ ಡೊಳ್ಳಿನ ಮ್ಯಾಳಿನವರು ಹಾಡುವ ಹಾಡುವಗಳನ್ನು ಕೇಳಿ ತಾನೂ ಏಕೆ ಈ ಹಾಡುಗಳನ್ನು ಹಾಡಬಾರದು ಎಂದುಕೊಂಡು ಡೊಳ್ಳಿನ ಹಾಡುಗಳನ್ನು ಪ್ರಾರಂಬಿಸಿದರು. ಜಾತಿಯಿಂದ ಬ್ರಾಹ್ಮಣರಾಗಿದ್ದರು ಕೂಡಾ ಕಲೆ ಎಲ್ಲರನ್ನು ಕೈ ಬೀಸಿ ಕರೆದರೆ ಕೆಲವರಿಗೆ ಮಾತ್ರ ಒಲಿಯುತ್ತದೆ. ಎಂಬಂತೆ ಇವರಿಗೆ ಡೊಳ್ಳಿನ ಹಾಡುಗಳು ದಿನೆದಿನೆ ಕಂಠವಾಗತೊಡಗಿದವು. ತಮ್ಮ ಗ್ರಾಮದೇವರ ಜಾತ್ರೆಯಲ್ಲಿ ಮೊದಲಬಾರಿಗೆ ಹಾಡಿದ ಆ ಕ್ಷಣಗಳು ಜೋಶಿಯವರು ಇಂದಿಗೂ ಮೇಲುಕು ಹಾಕುತ್ತಾರೆ. ಬೇರೆ ಊರುಗಳಲ್ಲಿ ಡೊಳ್ಳಿನ ಹಾಡಿಕೆಗಳಿವೆ ಎಂದು ತಿಳಿದರೆ ತಪ್ಪದೆ ಹೋಗುತ್ತಾರೆ. ಬೇರೆ ಊರುಗಳಲ್ಲಿ ಡೊಳ್ಳಿನ ಹಾಡಿಕೆಗಳಿವೆ ಎಂದು ತಿಳಿದರೆ ತಪ್ಪದೆ ಹೊಗುವುದು ಇವರಿಗೊಂದು ಗೀಳಾಯಿತು. ತಮ್ಮ ಉತ್ಸಾಹಕ್ಕೆ ಪ್ರೊತ್ಸಾಹಿಸಿದ ಹಿರಿಯರಾದ ಶ್ರೀ:ವಿಠ್ಠಲ ಟೋಪನಗೋಳ ಹಾಗೂ ಶ್ರೀ:ಭೀಮಪ್ಪಾ ಬೆಳ್ಳಿಕಿ ಇನ್ನೂ ಮುಂತಾದವರನ್ನು ಈಗಲೂ ಸ್ಮರಿಸುತ್ತಾರೆ.
ಜೋಶಿಯವರು ಹಾಡತೊಡಗಿದರೆ ಅವರ ಬಾಯಿಂದ ಓತಪ್ರೋತವಾಗಿ ಹೊರಬರುವ ಡೊಳ್ಳಿನ ಹಾಡುಗಳು ಅಸಂಖ್ಯಾಂತ, ಮತ್ತು ಇವರು ಸ್ವತಃ ಹಾಡುಗಳುನ್ನು ರಚಿಸಿ ಹಾಡಿದ್ದಾರೆ. ಉದಾ: ಬಾರದು ಬಪ್ಪದು, ಗುರುತದ ಎಲ್ಲರಿಗಿ, ಸುಖದುಃಖ ತಾವಾಗೆ ಬರತಾವೂ ಮುಂತಾದವುಗಳನ್ನು ಬರೆದುಹಾಡಿದ್ದಾರೆ. ತಮ್ಮ 47 ವರ್ಷಗಳ ಜೀವನ ಯಾತ್ರೆಯಲ್ಲಿ 4600ಕೊ ಹೆಚ್ಚು ಕಾರ್ಯಕ್ರಮಗಳು ನೀಡಿದ್ದಾರೆ. ಅಂದು ಅವರು ಪ್ರಚಾರಕ್ಕಾಗಿ ಹಾಡಲಿಲ್ಲ ಪ್ರಸಾರಕ್ಕಾಗಿ ಹಾಡಿ ಸಮಾಜವನ್ನು ಜಾಗೃತಗೊಳಿಸಿದರು. ಅವರಿಗೆ ಕೆಲವು ಹಾಡುಗಳನ್ನು ಬರೆದುಕೊಟ್ಟು ಹಾಡಿಸಿದ ಮಹನಿಯರನ್ನು ಅವರು ಮರೆತಿಲ್ಲ.
ರಾಮಕೃಷ್ಣ ಹೆಗೆಡೆಯವರು ಮುಖ್ಯಮಂತ್ರಿ ಆಗಿದ್ದಾಗ ವಿಜಯಪುರದಲ್ಲಿ ಒಂದು ಸಮಾರಂಭದಲ್ಲಿ ಜೋಶಿಯವರು ಹಾಡಿದ್ದ ಡೊಳ್ಳಿನ ಹಾಡನ್ನು ಕೇಳಿ ಆನಂದಿಸಿದರಂತೆ, ಅಪ್ಪಿಕೊಂಡರಂತೆ. ಜಾತಿ–ಧರ್ಮಗಳನ್ನು ಮೀರಿ ಬೆಳೆಯುವುದೇ ಕಲೆ ಮತ್ತು ಸಾಹಿತ್ಯ ಹಾಗೂ ಸಂಗೀತ ಅವರ ಅನಪಮ ಸೇವೆಗೆ ನೂರಾರು ಪ್ರಶಸ್ತಿ–ಪುರಸ್ಕಾರಗಳು ಅವರನ್ನು ಹಿಂಬಾಲಿಸಿ ಬಂದಿವೆ. ಬಿರುದು– ಸನ್ಮಾನಗಳಂತು ಲೆಕ್ಕವೆ ಇಲ್ಲಾ, ಕೆಲವು ಪ್ರಮುಖವಾದವುಗಳನ್ನು ಇಲ್ಲಿ ತಿಳಿಯಬಯಸುತ್ತೇನೆ.
ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘ ವಿಜಾಪುರದ ಇವರವತಿಯಿಂದ 1983ರಲ್ಲಿ ಜರುಗಿದ ಜಿಲ್ಲಾ ಜಾನಪದ ಕಲಾ ಮೇಳದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಅದೇ ವರ್ಷದಲ್ಲಿ ಜರುಗಿದ ಯುವಜನ ಸೇವಾ ಹಾಗೂ ತಾಲೂಕು ಅಭಿವೃದ್ಧಿ ಮಂಡಳಿಯವರ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲೂ ಪ್ರಶಸ್ತಿ ಪತ್ರ ಪಡೆದಿದ್ದಾರೆ.

- ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಬೆಂಗಳೂರು ಇವರಿಂದ 1987ರಲ್ಲಿ ಅರ್ಹತಾ ಪತ್ತ ಪಡೆದಿದ್ದಾರೆ.
- 1993ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡಮಿ ಹಾಗೂ ಆದಿಶಕ್ತಿ ಕಲಾಸಂಘ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪತ್ರದಜೊತಗೆ ಸನಾನ್ಮಗೊಂಡಿದ್ದಾರೆ.

- 2001ರಲ್ಲಿ ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಹುಲ್ಯಾಳದಲ್ಲಿ ಜರುಗಿದ ಕಲಾ ಮೇಳದಲ್ಲಿ ಅಭಿನಂದನ ಪತ್ರ ಪಡೆದಿದ್ದಾರೆ.
- ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ನಮದೆಹಲಿ, ಕರ್ನಾಟಕ ಸರ್ಕಾರದ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಬೆಂಗಳೂರು ಇವರ ಸಹಯೊಗದಲ್ಲಿ ಶ್ರೀ ವೇಂಟೆಶ್ವರ ಶ್ರೀ ಕೃಷ್ಣ ಪಾರಿಜಾತ ಕಂಪನಿಯವರ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಇವರಿಗೆ ಸತ್ಕರಿಸಿ ಅಭಿನಂದನ ಪತ್ರ ಪಡೆದಿದ್ದಾರೆ.
- 2003ರಲ್ಲಿ ಬಾಗಲಕೋಟೆ ಕನ್ನಡ ಮತ್ತು ಸಂಸ್ಕತಿ ಇಲಾಖೆಯವರು ಸಂಗೀತ ನಾಟಕ ಕಲಾಮೇಳದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.
- ವಿಜಾಪೂರ ನೆಹರು ಯುವ ಕೇಂದ್ರವರು 2005ರಲ್ಲಿ ನಡೆಸಿದ ನ್ಯಾಶನಲ್ ಇಂಟಿಗ್ರೇಶನ್ ಕ್ಯಾಂಪಿನಲ್ಲಿ ಇವರಿಗೆ ವಿಶೇಷ ಪ್ರಶಸ್ತಿಯನ್ನು ನೀಡಿದ್ದಾರೆ.
- ನವರಸಪುರ ಉತ್ಸವ ಹಾಗೂ ಗೋಳಗುಮ್ಮಟದ 350ನೇ ವರ್ಷಚರಣೆ ಸಂದರ್ಭದಲ್ಲಿ ಜಿಲ್ಲಾಡಳಿತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪಡಿದಿದ್ದಾರೆ.
- 2006ರಲ್ಲಿ ಜಿಲ್ಲಾಡಳಿತ ಮತ್ತು ಸಮಾಜಕಲ್ಯಾಣ ಇಲಾಖೆ ವತಿಯಿಂದ ಜರುಗಿದ ಡಾ॥ ಬಿ ಆರ್ ಅಂಬೇಡ್ಕರರ 99ನೇ ಜನ್ಮ ದಿನದ ಆಚರಣೆ ಸಂದರ್ಭದಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.
- 2006ರಲ್ಲಿ ವಿಜಾಪುರದ ಜಿಲ್ಲಾ 10ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರಿಗೆ ಸನ್ಮಾನಿಸಿ ಗೌರವಿಸಿದೆ.
- 2007ರಲ್ಲಿ ವಿಜಾಪುರದ ಕನ್ನಡ ಮತ್ತು ಸಂಸ್ಕøತಿ ಇಲಾಕೆ ಹಮ್ಮಿಕೊಂಡ ಜಾನಪದ ಜಾತ್ರೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರವನ್ನು ಪಡಿದಿದ್ದಾರೆ.
- 2013 ಫೆಬ್ರುವರಿಯಲ್ಲಿ ವಿಜಾಪೂರದಲ್ಲಿ ಜರುಗಿದ 79 ಅಖೀಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರವನ್ನು ಪಡೆದಿದ್ದಾರೆ.
- ಈ ಮೇಲಿನವುಗಳಷ್ಟೆ ಅಲ್ಲದೆ ಇನ್ನೂ ಹಲವಾರು ಸಂಘ–ಸಂಸ್ಥೆಗಳು ಇವರಿಗೆ ಆಹ್ವಾನಿಸಿ ಸನ್ಮಾಸಿದಿದ್ದಾರೆ ರಾಜ್ಯದ ಧಾರವಾಡ, ಬೆಳಗಾವಿ, ಬೀದರ್, ಗುಲ್ಬರ್ಗಾ, ಬಾಗಲಕೋಟೆ. ಮುಂತಾದ ಪ್ರಮುಖ ನಗರಗಳಲ್ಲೂ ಕಾರ್ಯಕ್ರಮಗಳನ್ನೂ ಕೊಟ್ಟಿದ್ದಾರೆ ನೆರೆ ರಾಜ್ಯ ಮಹಾರಾಷ್ಟದ ಸಾಂಗಲಿ ಸೋಲ್ಲಾಪೂರ, ಜತ್ತ ಭಂಡಾರಕವಟೆ ಮುಂತಾದ ಕಡೆಗಳಲ್ಲಿ ಕಾರ್ಯಕ್ರಮಗಳು ನೀಡಿದ್ದಾರೆ

ಬಹುಮುಖ ಪ್ರತಿಭಾವಂತರಾದ ಶ್ರೀಯುತ ಜೋಶಿಯವರು ಡೊಳ್ಳಿನ ಹಾಡುಗಳು ಕನ್ನಡಿಗರ ಮನೆ ಮನಗಳಲ್ಲಿ ಉಳಿದು ನಶಿಸುತ್ತಿರುವ ನಮ್ಮ ಜಾನಪದ ಕಲೆಗಳ ಪುನರುಜ್ಜೀವನಕ್ಕೆ ನಾಂದಿಯಾಗಲಿ, ಅವರು ಇಳೀವಯಸ್ಸಿನಲ್ಲಿಯು ಮಾಸದ ಅವರ ಹಾಡುಗಾರಿಗೆಯೇ ಸಾಕ್ಷಿಯಾಗಿದೆ. ತಮ್ಮ ತಂಡದ ಸರ್ವ ಸದಸ್ಯರನ್ನು ತಮ್ಮ ಕುಟುಂಬದ ಸದಸ್ಯರಂತೆ ಕಾಣುವುದು ಅವರ ವಿಶೀಷ್ಟ ಗುಣವಾಗಿದೆ. ಇಂದು ಹಳ್ಳಿಗೊಂದು ಭಜನಾ ತಂಡ ಹಾಡಿನ ತಂಡಗಳ ಹುಟ್ಟಿ ಕೆಲವೆ ದಿನಗಳಲ್ಲಿ ಭಿನ್ನಾಬಿಪ್ರಾಯಗಳು ಬಂದು ಬೇರೆಯಾಗಿರುವುದನ್ನು ಕಾಣುತ್ತೇವೆ. ಆದರೆ ಜೋಶಿಯವರು ಅಂದು ಕಟ್ಟಿದ ಸಂಘ ಇಂದಿಗೂ ಉಳಿದಕೊಂಡಿದೆ 'ಜನ ಸೇನೆಯೇ ಜನಾರ್ಧನನ ಸೇವೆ" ಎಂಬ ಹಾಗೆ ಅವರು ಒಂದು ಅವಧಿಗೆ ನೀಡೋಣಿ ಗ್ರಾಮ ಪಂಚಾಯತದ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿ ಜನ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಇವರ ಕೀರ್ತಿಪತಾಕೆ ಗಗನದೇತರಕ್ಕೆ ಹಾರಿ ಇಂದಲ್ಲಾ ನಾಳೆ ಕರ್ನಾಟಕ ಸರ್ಕಾರವು ಅವರ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನನ್ನು ನೀಡಿ ಗೌರವಿಸಲಿ ಎಂಬುದು ನಮ್ಮೆಲ್ಲರ ಮನದ ಬಯಕೆಯಾಗಿದೆ. ಸರ್ಕಾರವು ಇವರ ಪ್ರತಿಭೆ ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡುವಂತಾಗಲಿ ಎಂದು ಹಾರೈಸುತ್ತೇವೆ.

**ಪರಾಮರ್ಶನ ಗ್ರಂಥಗಳು:**


1. ಜಾನಪದ ಸಮ್ಮುಖ– ಡಾ.ದೇವಂದ್ರಕುಮಾರ ಹಕಾರಿ
2. ಮೈಲಾರಲಿಂಗ– ಖಂಡೋಭಾ– ಡಾ.ಎಮ್.ಬಿ. ನೇಗಿನಾಳ
3. ದಾಸಪ್ಪ–ಜೋಗಪ್ಪ– ಡಾ. ಹಿ.ಚಿ ಬೋರಲಿಂಗಯ್ಯ
4. ನಡಿಯಪ್ಪ ನಮ್ಮ ನಾಡಿಗೆ– ಸಂ: ವಿರುಪಾಕ್ಷಗೌಡ ಕೆ. ಮತ್ತು ಕೊಟ್ರಪ್ಪ ಮೇಟಿ
5. ಕನ್ನಡ ನಾಟಕ–ಶ್ರೀ ತ.ಸು. ಶಾಮರಾಯ